ಯೋಚನೆ ಜಾಸ್ತಿ. ಅವಳಿಗಿಂತದ್ದೇ ಬಟ್ಟೆ ಬೇಕು ಎಂದು ಶುರುವಾಗುವ ಯೋಚನೆ, ಅವಳು ಇಂತದ್ದನ್ನೇ ತಿನ್ನಬೇಕು ಎನ್ನುವವರೆಗೂ ಹೋಗುತ್ತಿತ್ತು. ತಾನು ಹೇಳಿದ್ದನ್ನು ಮಾಡದಿದ್ದರೆ ರೇಗುವುದು, ಸಣ್ಣಗೇ ಹೊಡೆಯೋದು ನಡೆಯುತ್ತಿತ್ತು. ಆದರೆ ಇದರಿಂದ ಏನನ್ನೂ ಸಾಧಿಸಿದಂತಾಗುವುದಿಲ್ಲ ಎನ್ನುವುದು ಶಾಲಿನಿಗೆ ಅರ್ಥವಾಗಿದೆ. ಅದಕ್ಕೋಸ್ಕರ ಬೇರೊಂದು ವಿಧದಲ್ಲಿ ಸಾನ್ವಿಗೆ ಖುಷಿ ಕೊಡಬೇಕು ಅನ್ನಿಸಿ, ಅವಳಿಗೆ ಆಟವಾಡಲು ಡಿಜಿಟಲ್ ಸ್ಲೇಟು, ಝರಿ ಝರಿ ಬಟ್ಟೆಗಳು, ಕಾಂಗರೂ, ಬೊಂಬೆಗಳ ಚಿತ್ರವಿರುವ ಬಟ್ಟೆ, ಬೆಕ್ಕು, ಹಕ್ಕಿಗಳ ಮೂತಿಗಳಿರುವ ಸ್ಕೂಲು ಬ್ಯಾಗು, ಮಿರಿ ಮಿರಿ ಗೊಂಬೆಯ ಚಿತ್ರವಿರುವ ಚಪ್ಪಲಿ, ಬಣ್ಣ ಬಣ್ಣದ ಹೇರ್ ಬ್ಯಾಂಡು ಹೀಗೆ ಅಲಂಕಾರಿಕ ವಸ್ತುಗಳು, ಮಕ್ಕಳ ಆಟಿಕೆ, ಸರಂಜಾಮುಗಳನ್ನೆಲ್ಲಾ ಸಾನ್ವಿಗೆ ತಂದುಕೊಡುತ್ತಿದ್ದಳು. ಆ ಚಪ್ಪಲಿ ಗೊಂಬೆ, ಬಟ್ಟೆಯ ಕಾಂಗರೂ, ಬ್ಯಾಗಿನ ಉಲಿಯದ ಆ ಹಕ್ಕಿಯ ಮೌನರಾಗಗಳ ಜೊತೆ ಸಾನ್ವಿ ಒಂದಷ್ಟು ದಿನ ತಣ್ಣಗಿದ್ದುಬಿಡುತ್ತಿದ್ದಳು. ಶಶಿಕಿರಣ ಕೂಡ ಇದ್ದ ಬದ್ದ ಕಂಪನಿಗಳ ಚಾಕ್ಲೇಟ್, ಬಿಸ್ಕಿಟು, ಕಾಮಿಕ್ ಬುಕ್ಕು, ಇನ್ನೂ ಏನೇನೋ ತಂದು ಸಾನ್ವಿಯ ಮುಂದೆ ಸುರಿಯುತ್ತಿದ್ದ.

ಸಾನ್ವಿ ಈಗ ಎರಡನೇ ಕ್ಲಾಸು, ಓದಿನಲ್ಲೇನೋ ಚುರುಕಿದ್ದಾಳೆ. ಆದರೆ ಅವಳು ಬೆಳೆಯುತ್ತಿದ್ದಂತೆಲ್ಲಾ ಶಾಲಿನಿಗೆ ಯೋಚನೆ ಜಾಸ್ತಿಯಾಗುತ್ತಿದೆ. ಹಿಂದೆ ಶಾಲಿನಿ ಆಫೀಸಿನಿಂದ ಮನೆಗೆ ಬಂದ ಕೂಡಲೇ ಬಡಬಡನೇ ಮಾತಾಡುತ್ತಿದ್ದ ಸಾನ್ವಿ, ಈಗ ಇಬ್ಬರೂ ಅವರ ಕೆಲಸದಲ್ಲೇ ಕಳೆದುಹೋಗಿರುವುದನ್ನು ನೋಡಿ ತಾನೂ ಪುಸ್ತಕದಲ್ಲಿ ಏನೇನೋ ಚಿತ್ರ ಗೀಚುತ್ತಲೋ ಇದ್ದುಬಿಡುತ್ತಿದ್ದಳು. ತಾನು ತಂದುಕೊಡುವ ಯಾವ ಆಟಿಕೆಗಳೂ, ಯಾಕೆ ಸಾನ್ವಿಯೊಳಗೆ ಬೆರಗು ಹುಟ್ಟಿಸುತ್ತಿಲ್ಲ? ಏನು ತಂದುಕೊಟ್ಟರೂ ಬಾಯ್ತುಂಬಾ ಯಾಕೆ ನಗುವುದಿಲ್ಲ? ಎನ್ನುವ ಯೋಚನೆ ಶಾಲಿನಿಗೆ ಬಂದಿದ್ದರೂ, ಈಗಿನ ಮಕ್ಕಳೇ ಹೀಗೆ ಎಂದು ಸುಮ್ಮನಾಗುತ್ತಾಳೆ. ಒಮ್ಮೆ ಮನೆಗೆ ಬಂದ ಶಾಲಿನಿಯ ಚಿಕ್ಕಪ್ಪ, ಸಾನ್ವಿಗೆ ಒಂದಷ್ಟು ಆಟಿಕೆ ತಂದುಕೊಟ್ಟಿದ್ದರು. ಅವಳದನ್ನು ಯಾವ ವಿಶೇಷ ಬೆರಗಿನ ಭಾವನೆಯೂ ಇಲ್ಲದಂತೆ ತಗೊಂಡು ಏನೂ ಪ್ರತಿಕ್ರಿಯಿಸದೇ ಸುಮ್ಮನಾಗಿದ್ದಳು. 'ಪುಟ್ಟಿ ಇಷ್ಟವಾಗಿಲ್ವೇನೇ ಆ ಗೊಂಬೆ' ಎಂದು ಕೇಳಿದ್ದಕ್ಕೆ. ಸಾನ್ವಿ, ಹೂ ಹೂ ಎಂದು ಪುಟ್ಟಗೆ ನಕ್ಕಂತೆ ಮಾಡಿದ್ದಳು. 'ಥ್ಯಾಂಕ್ಸ್ ಹೇಳು ಸಾನ್ವಿ, ಅಷ್ಟು ದೊಡ್ಡ ಗೊಂಬೆ ಕೊಟ್ಟಿದ್ದಕ್ಕೆ' ಎಂದು ಶಾಲಿನಿಯೇ ಅವಳಿಗೆ ಹೇಳಬೇಕಾಯ್ತು, ಹೇಗೋ ಕಷ್ಟಪಟ್ಟು ಥ್ಯಾಂಕ್ಸ್ ಅಂದಿದ್ದಳು ಸಾನ್ವಿ.

ಯಾರು ಏನು ಕೊಟ್ಟರೂ ಥ್ಯಾಂಕ್ಸ್ ಹೇಳೋಕಾಗಲ್ವಾ ನಿಂಗೆ ಎಂದು ತುಂಬಾ ಸಲ ಶಾಲಿನಿ, ಸಾನ್ವಿಯನ್ನು ಗದರಿಸಿದ್ದರೂ, ಸಾನ್ವಿಯೊಳಗೆ ಸಹಜವಾಗಿ ಥ್ಯಾಂಕ್ಸ್ ಹೇಳಬೇಕು ಎನ್ನುವ ಭಾವನೆ ಮಾತ್ರ ಬರುವುದೇ ಇಲ್ಲ. ಎಲ್ಲರೂ ತಂದು ಸುರಿಯುವ ವಸ್ತುಗಳನ್ನೆಲ್ಲಾ ನೋಡಿ ನೋಡಿ ಗಿಫ್ಟ್ ಎನ್ನುವುದು, ಬೆರಗು, ಖುಷಿ ಉಕ್ಕಿಸುವ ನಕ್ಷತ್ರಮಾಲೆಗಳಾಗಿ ಅವಳೊಳಗೆ ಹೊಳೆಯಲೇ ಇಲ್ಲ.

ಮಗಳ ಮುಗುಳೊಳಗೆ ಖುಷಿಯ ಕಾಮನಬಿಲ್ಲು ಮೂಡಲು, ಅವಳೊಳಗೆ ನಗು ಕಡಲಾಗಲು ಏನು ಮಾಡಬೇಕು? ಎಂದು ಶಾಲಿನಿ ತುಂಬಾ ಸಲ ಯೋಚಿಸಿದ್ದರೂ, ಕಡಲಲೆಗಳಂತೆ ಮುನ್ನುಗ್ಗಿ ಬರುವ ಆಫೀಸಿನ ಒತ್ತಡಗಳಲ್ಲಿ ಅವಳು ಕೊಚ್ಚಿಹೋಗುತ್ತಿದ್ದಳು. ದೈನಂದಿನ ಜಂಜಡ, ತುಮುಲಗಳಲ್ಲಿ ಮನಸ್ಸು ಜಾರುತ್ತಿತ್ತು.

ಬಾಲ್ಕನಿಯ ವಿಶಾಲ ಕಿಟಕಿಯಿಂದ ತುಂಬಾ ದೂರದವರೆಗೂ ಕಾಣಿಸುತ್ತಿದ್ದ ದೊಡ್ಡ ದೊಡ್ಡ ಕಟ್ಟಡಗಳೆಲ್ಲಾ ರಾತ್ರಿಯಾಗಲು ಹವಣಿಸುತ್ತಿದ್ದವು. ಐಟಿ ಕಟ್ಟಡಗಳಿಂದ ಆಗಲೇ ಸಾವಿರಾರು ದೀಪಗಳು ಹೊತ್ತಿಕೊಳ್ಳತೊಡಗಿ ಬೆಳಕೇ ಆ ಇಡೀ ಕಟ್ಟಡವನ್ನು ಹೊತ್ತೊಯ್ದಂತೆ ಕಾಣುತ್ತಿತ್ತು. ವಿಮಾನಗಳಂತೂ ಬೊಬ್ಬೆ ರಾವಣನಂತೆ ಎಲ್ಲವನ್ನೂ ಅಪೋಶನ ತೆಗೆದುಕೊಳ್ಳುವಂತೆ ಹಾರುತ್ತಲೇ ಇತ್ತು.

ಸಾನ್ವಿ, ಡ್ರಾಯಿಂಗ್ ಪುಸ್ತಕದಲ್ಲಿ ಅಂತದ್ದೇ ಕಟ್ಟಡಗಳನ್ನು, ಆ ಕಟ್ಟಡಗಳ ಮೇಲೆ ಹಾರುತ್ತಿರುವಂತೆ ವಿಮಾನವೊಂದನ್ನು ಬಿಡಿಸಿ, ತಾನು ಬಿಡಿಸಿದ್ದು ಸರಿಯಾಗಿದೆಯೇ? ಎಂದು ಮತ್ತೆ ಮತ್ತೆ ನೋಡುತ್ತಾ, ತನ್ನ ಡ್ರಾಯಿಂಗ್ ಯಾರಿಗೆ ತೋರಿಸೋದು? ಹೇಗೂ ಅಮ್ಮ ಬರ್ತಾಳಲ್ಲ, ಎಂದು ಯೋಚಿಸಿ ಮತ್ತಾವುದೋ ಬಣ್ಣಗಳಲ್ಲಿ ತಲ್ಲೀನಳಾದಳು.

ಕಾಲಿಂಗ್ ಬೆಲ್ ಸದ್ದಾದಾಗ ಪಟಕ್ಕನೇ ಹೋಗಿ ಬಾಗಿಲು ತೆರೆದಳು. ಒಳಗೆ ಬಂದ ಶಾಲಿನಿಯನ್ನು ನೋಡಿ, ಸೋಫಾದತ್ತ ಹೋಗಿ' ನೋಡಮ್ಮ ಇವತ್ತಿನ ಚಿತ್ರ' ಎಂದು ಸಣ್ಣಗೇ ಮುಖವರಳಿಸಿದಳು. ಆ ಮುಖದಲ್ಲಿ ಆಗಷ್ಟೇ ಬಿದ್ದ ಮಳೆಯಂತಹ ಮೆದುಭಾವವಿತ್ತು, ಯಾರನ್ನೂ ಸೆಳೆದುಬಿಡುವ ಚುಂಬಕ ತಂಪಿತ್ತು.

ಆಫೀಸಿನ ಒತ್ತಡಗಳಿಂದ ಆಗಷ್ಟೇ ಕಳಚಿಕೊಂಡು ಬಂದ ಶಾಲಿನಿ, ಒಮ್ಮೆಲೇ ಮನೆ ಅನ್ನೋ ದೈನಂದಿನ ಪ್ರಪಂಚದ ಆಳದ ಗುಹೆಯೊಂದರೊಳಗೆ ಹೊಕ್ಕಲು ತ್ರಾಸಪಡುವವಳಂತೆ, 'ಹೋ ಹೋ ಹೌದಾ, ಚಂದ ಆಗಿದೆ' ಎಂದಷ್ಟೇ ಹೇಳಿ ಬಾತ್‌ರೂಮಿಗೆ ಹೋದಳು. ಮುಖಕ್ಕೆ ಸೋಪು ಹಚ್ಚಿ ತಣ್ಣೀರನ್ನು ಪಟಪಟನೇ ಬಡಿವಾಗ ನೂರಾರು ಒತ್ತಡಗಳು, ಬಾಸ್‌ನ ರೇಗಾಟ, ತನ್ನೊಳಗಿನ ಸಿಟ್ಟುಗಳೆಲ್ಲವೂ ನೀರಲ್ಲೇ ತೊಳೆದುಹೋದಂತೆ ಹಗುರಾದಳು. ಇವತ್ತಾದ್ರೂ ಮನೇಲಿ ಶಾಂತವಾಗಿರಬೇಕು, ಆಫೀಸಿನ ಗುಂಗಿನಿಂದ ಕಳಚಿಕೊಂಡು ಮನೆಯ ಸುಖ ಶಾಂತಿಯಲ್ಲಿ ಒಂದಾಗಬೇಕು ಅಂತೆಲ್ಲ ಅವಳಿಗೆ ಇವತ್ತು ತುಂಬಾ ಅನ್ನಿಸುತ್ತಿತ್ತು. ಅಸ್ತವ್ಯಸ್ತವಾಗಿರುವ ಅಡುಗೆ ಕೋಣೆಯನ್ನು ಸ್ವಚ್ಛಮಾಡಿದಾಗ ತಾನೂ ಅದರ ಜೊತೆ ಸೇರಿ ಸ್ವಚ್ಛವಾದಂತೆನ್ನಿಸಿತು.

ಓವನ್ ಪಕ್ಕ ಇದ್ದ ಬ್ರೆಡ್‌ಗೆ ತುಪ್ಪ ಹಾಕಿ ರೋಸ್ಟ್ ಮಾಡಿ, ತನಗೊಂದು, ಸಾನ್ವಿಗೊಂದು ಪ್ಲೇಟ್‌ನಲ್ಲಿ ಹಾಕಿ, ಸಾನ್ವಿಗೆ ರುಚಿ ರುಚಿಯಾದ ಹಾರ್ಲಿಕ್ಸ್ ಮಾಡಿದಳು. ಇಬ್ಬರೂ ಕೂತು ತಿನ್ನುವಾಗ ಆಕಾಶದಲ್ಲಿ ಇನ್ನೂ ಕೆಲವು ವಿಮಾನಗಳು ಕೇಕೆ ಹಾಕಿದವು, ತಿನ್ನುತ್ತಲೇ ನೋಡುವ ಸಾನ್ವಿ ನೀನು ಮಾಡಿದ ಡ್ರಾಯಿಂಗು ಎಂದು ಮತ್ತೆ ಅವಳ ಬಣ್ಣದ ಪುಸ್ತಕದಲ್ಲಿ ಕರಗಿದಳು, ಅಲ್ಲಿನ ಹತ್ತಾರು ಕಟ್ಟಡಗಳ ನಡುವೆ ವಿಮಾನವೊಂದು ಹೋಗುತ್ತಿರುವುದನ್ನು ಸಾನ್ವಿ ಎಷ್ಟು ಸೂಕ್ಷ್ಮವಾಗಿ ಬಿಡಿಸಿದ್ದಾಳೆಂದು ಹಿಗ್ಗುತ್ತ, ಅವಳ ಕೆನ್ನೆ ಸವರಿಸಿದಳು.

ಸಾನ್ವಿಯ ಆ ಚಿತ್ರ ನೋಡಿ ಶಾಲಿನಿಗೆ ತಾನು ಬಾಲ್ಯದಲ್ಲಿ ಎಷ್ಟೊಂದೆಲ್ಲಾ ಚಿತ್ರ ಬಿಡಿಸುತ್ತಿದ್ದೆ, ಆ ಚಿತ್ರಗಳಲ್ಲಿ ತಾನು ನೋಡಿದ ಎಷ್ಟೊಂದೆಲ್ಲಾ ಪ್ರಪಂಚಗಳು ಬರುತ್ತಿದ್ದವು. ತನ್ನೂರಿನ ನದಿ, ಬೆಟ್ಟ, ಗುಬ್ಬಚ್ಚಿ, ಅಂಗಳ, ಹಸುರು, ಚಿಟ್ಟೆ, ಹೂವು, ಸೆಗಣಿ ಸಾರಿಸಿದ ನೆಲ, ಕೆಂಪು ಬಣ್ಣದ ಥಳಥಳ ನೆಲ, ಆಹಾ ಯೋಚಿಸುತ್ತ ಹೋದಂತೆ ಅವಳಿಗೆ ಪುಳಕವಾಯ್ತು. ತನ್ನೊಳಗಿರುವ ಪ್ರಪಂಚವನ್ನು, ಅದರ ಮುಗ್ಧತೆಯನ್ನು ಚೂರೂ ಉಳಿಸಿಕೊಳ್ಳದೇ, ಅದರ ಬಗ್ಗೆ ಯೋಚಿಸಲೂ ಹೋಗದೇ ನನ್ನನ್ನು ಕಳೆದುಕೊಂಡುಬಿಟ್ಟಿದ್ದೆನಲ್ಲವಾ ಎಂದು ಒಂದು ಕ್ಷಣ ಅನ್ನಿಸಿತು. ಆಗ ನನ್ನೆದುರು ಕಂಡದ್ದೆಲ್ಲಾ ಕಂಡ ಹಾಗೆ ಬಿಡಿಸುತ್ತಿದ್ದೆ. ಆದರೆ ಸಾನ್ವಿಯ ಎದುರಿರೋದು ಬರೀ ವಿಮಾನಗಳೇ ಹಾರುವ, ಕಟ್ಟಡ ತಣ್ಣಗೆ ನಿಂತಿರುವ ಚಿತ್ರಗಳಲ್ಲವೇ ಎಂದು ಬಾಲ್ಕನಿಯತ್ತ ನೋಡಿ ಶಾಲಿನಿ ಮರುಕಪಟ್ಟಳು. ಈ ವಿಮಾನ, ಈ ಕಟ್ಟಡ, ಈ ಯಾಂತ್ರಿಕ ಮೌನ, ತಮ್ಮೊಳಗಿರುವ ಚೆಂದದ ಸೂಕ್ಷ್ಮ ಪ್ರಪಂಚದ ಸದ್ದು, ಬೆರಗು, ಪಿಸುಮಾತುಗಳನ್ನೆಲ್ಲಾ ನುಂಗಿ ಹಾಕುತ್ತಿದೆಯಾ? ಎಂದು ಬದುಕಲ್ಲಿ ಮೊಟ್ಟ ಮೊದಲ ಬಾರಿಗೆ ಎನ್ನುವಂತೆ ಶಾಲಿನಿಗೆ ಅನ್ನಿಸಿತು. ಇಲ್ಲ, ಹಾಗೆ ನುಂಗಿ ಹಾಕಲು ಇನ್ನು ಬಿಡುವುದಿಲ್ಲ ಎಂದವಳು ಪ್ರತಿಜ್ಞೆ ಮಾಡುವವಳಂತೆ ಗಂಭೀರವಾದಳು.

ತಾನು ಕಳೆದ ಬಾಲ್ಯದ ಸೊಗಸಂತೂ ಸಾನ್ವಿಗೆ ಸಿಕ್ಕಲಾರದು. ಆದರೆ ಈ ಕಾಲದ ಒಂದಷ್ಟು ಸಹಜ ಖುಷಿಗಳಾದರೂ ಸಿಕ್ಕಬೇಕಲ್ಲ ಎಂದು ಯೋಚಿಸುತ್ತಲೇ 'ಬಾ ಸಾನ್ವಿ, ಕೆಳಗೆ ಹೋಗಿ ಒಂದು ರೌಂಡ್ ಹಾಕಿ ಬರುವ' ಎಂದು ಖುಷಿಯಿಂದ ಕರೆದಳು. ಮೊದಲ ಬಾರಿಗೆ ಶಾಲಿನಿ ಹೀಗೆ, ಬಾ ರೌಂಡ್ ಹಾಕಿ ಬರೋಣ ಅಂದಿದ್ದು ಕೇಳಿ, ಆ ಕರೆಯಲ್ಲೊಂದು ಹೊಸತನ, ಆಪ್ತತೆ, ಏನೋ ಒಂದು ದೃಢತೆ ಎಲ್ಲವೂ ಒಮ್ಮೆಗೇ ಸಿಕ್ಕಿದಂತಾಗಿ ಸಾನ್ವಿ ಅರಳಿದಳು. ಗ್ರೌಂಡ್ ಫ್ಲೋರಿಗೆ ಬಂದು, ಸಾನ್ವಿಯ ಪುಟ್ಟ ಕೈಹಿಡಿದು ಸನ್ ಬರ್ಡ್ ಪಾರ್ಕ್‌ನತ್ತ ನಡೆದಳು ಶಾಲಿನಿ. ಅಲ್ಲಿ ಹತ್ತೆಂಟು ದೊಡ್ಡ ದೊಡ್ಡ ಮರಗಳು ಸಂಜೆಯನ್ನೇ ಧ್ಯಾನಿಸುತ್ತಿರುವಂತೆ ನಿಂತಿತ್ತು. ಹಬ್ಬಿಕೊಂಡಿದ್ದ ಹುಲ್ಲುಹಾಸು ಸಂಜೆಗೆ ಇನ್ನಷ್ಟು ಮೃದುವಾದಂತೆ ತೋರುತ್ತಿತ್ತು. ಇಬ್ಬರೂ ಮರಗಳೇ ತುಂಬಿರುವ ಮಬ್ಬು ಬೆಳಕಿನ ಹಾದಿನಲ್ಲಿ ನಡೆದರು. ನಡೆಯುತ್ತಿದ್ದಂತೆಲ್ಲಾ ಒಮ್ಮೆ ಆಕಾಶವೆಲ್ಲಾ ಮುಚ್ಚಿ, ಮರಗಳ ರೆಂಬೆ ಕೊಂಬೆಗಳೆಲ್ಲಾ ತಮಗೆ ಶ್ರೀರಕ್ಷೆಯಾಗಿ ಗಾಳಿ ಬೀಸಿದಂತನ್ನಿಸಿತು. ಸಾನ್ವಿ ಆ ಮರ, ಆ ಸಂಜೆ, ಆ ಗಾಳಿ, ಆ ಹುಲ್ಲು ಒಮ್ಮೆಲೇ ಸೃಷ್ಟಿಸಿದ ಮಾಯಕದ ವಾತಾವರಣದಲ್ಲಿ ತನ್ನೊಳಗೆ ಒತ್ತರಿಸಿಕೊಂಡು ಬಂದ ಖುಷಿಯಲ್ಲೆಲ್ಲಾ ಸಾರುವಂತೆ ನಿಂತಲ್ಲೇ ಕುಪ್ಪಳಿಸಿದಳು, ಈವರೆಗೆ